




ಸುದ್ದಿ ಸಂಚಯ

# ರಾಮಕೃಷ್ಣ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವ

**ಸಮಾರೋಪ ಸಮಾರಂಭ :** ಮೇ ೧ರಂದು **ಬಲರಾಮ ಮಂದಿರ**ದಲ್ಲಿ ರಾಮಕೃಷ್ಣ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವದ ಸಮಾರೋಪ ಸಮಾರಂಭವು ಬೇಲೂರು ಮಠದ ಆಶ್ರಯದಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರ ಹಾಗೂ ಉಪಾಧ್ಯಕ್ಷರಾದ ಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರ ಆಶೀರ್ವಚನಗಳನ್ನು ವಾಚಿಸಲಾಯಿತು. ಇತರ ಉಪಾಧ್ಯಕ್ಷರುಗಳಾದ ಸ್ವಾಮಿ ಭಜನಾನಂದಜಿ, ಸ್ವಾಮಿ ಗಿರೀಶಾನಂದಜಿ, ಪ್ರಧಾನ ಕಾರ್ಯದರ್ಶಿಗಳು, ಕೆಲವು ಮಂದಿ ಹಿರಿಯ ಸಂನ್ಯಾಸಿಗಳು, ವಿದ್ವಾಂಸರು ಹಾಗೂ ಗಣ್ಯವ್ಯಕ್ತಿಗಳು ಇದರಲ್ಲಿ ಭಾಗವಹಿಸಿ ಮಾತನಾಡಿದರು. ಸುಮಾರು ೨೦೦ ಮಂದಿ ಸಂನ್ಯಾಸಿಗಳು ಹಾಗೂ ೨೪೦೦ ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಇದಲ್ಲದೆ ಭಾರತದ ಹಾಗೂ ವಿದೇಶಗಳಲ್ಲಿನ ಶಾಖಾಕೇಂದ್ರಗಳು ರಾಮಕೃಷ್ಣ ಮಿಷನ್ನಿನ ೧೫ನೇ ವಾರ್ಷಿಕೋತ್ಸವವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಸಿದವು :

೧. **ಅಹಮದಾಬಾದ್** : ಏಪ್ರಿಲ್ ೩೦ ಹಾಗೂ ಮೇ ೧ ರಂದು ಸಂಗೀತ ಕಾರ್ಯಕ್ರಮ ಹಾಗೂ ನಾರಾಯಣ ಸೇವೆ (ಬಡ ಜನರಿಗೆ ಅನ್ನದಾನ) ನಡೆಯಿತು. **೨. ಆಲ್ಮೋರಾ:** ಏಪ್ರಿಲ್ ೧೦, ೧೧, ೧೨ ರಂದು ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ವಿಚಾರ ಸಂಕಿರಣಗಳು ನಡೆದವು. ೩. **ಬಸವನಗುಡಿ,** ಬೆಂಗಳೂರು: ಮೇ ೧೨ರಿಂದ ೧೪ರ ವರೆಗೆ ರಾಮಕೃಷ್ಣ ಮಿಷನ್ನಿನ ಚಟುವಟಿಕೆಗಳನ್ನು ಕುರಿತ ವಿಚಾರ ಸಂಕಿರಣ ನಡೆಯಿತು. ಸುಮಾರು ೫೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ೪. **ಚೆಂಗಂ:** ಮೇ ೪ ರಂದು ಸಾರ್ವಜನಿಕ ಸಭೆ. ೫. **ಚೆನ್ನೈ ಮಠ:** ಮೇ ೧ ರಂದು ಸಾರ್ವಜನಿಕ ಸಭೆ; ಸ್ವಾಮಿ ಗೌತಮಾನಂದಜಿ ಅವರು ಅಧ್ಯಕ್ಷತೆ ವಹಿಸಿದ್ದರು. ೬. **ಚೆನ್ನೈ ಸ್ಟೂಡೆಂಟ್ಸ್ ಹೋಮ್:** ಮೇ ೧ರಂದು ಸಾರ್ವಜನಿಕ ಸಭೆ. ಸ್ವಾಮಿ ಗೌತಮಾನಂದಜಿ ಅವರಿಂದ ಅಧ್ಯಕ್ಷತೆ. ತಮಿಳು ಸಾಕ್ಷ್ಯಚಿತ್ರ ಪ್ರದರ್ಶನ ಕೂಡ ನಡೆಯಿತು. **೭.ಕೊಂಟ್ಯಾ:** ಮೇ ೨೦-೨೧ರಂದು ಕಾಲೇಜು ವಿದ್ಯಾರ್ಥಿಗಳಿಗಾಗಿ ಯುವ ಶಿಬಿರ. **೮. ಕೂಚ್‌ಬಿಹಾರ್:** ಮೇ ೧೪ ರಂದು ವಿಶೇಷ ಪ್ರವಚನ. **೯. ಹಲಸೂರು:** ಏಪ್ರಿಲ್೧೭ ಹಾಗೂ ಮೇ ೧ರಂದು ಸಂಗೀತ ಕಾರ್ಯಕ್ರಮಗಳು; ಮೇ ೧ ರಂದು ಆಧ್ಯಾತ್ಮಿಕ ಶಿಬಿರ. **೧೦. ಹೈದರಾಬಾದ್:** ಏಪ್ರಿಲ್ ೮ರಂದು 'ಕೆಲಸದ ಮೂಲಕ ವಿಕಸನ' ಶಿಬಿರ; ಮೇ ೧ ರಂದು ಸಾರ್ವಜನಿಕ ಸಭೆ; ಮೇ ೨೭ರಂದು 'ಅನೇಕತೆಯಲ್ಲಿ ಏಕತೆ' ಎಂಬ ಸರ್ವಧರ್ಮ ಸಮ್ಮೇಳನ. **೧೧. ಇಂದೋರ್:** ಮೇ ೧೨ ಹಾಗೂ ೧೪ರಂದು ಆವಾಸಿ ಯುವ ಸಮ್ಮೇಳನ. **೧೨. ಜಲಪ್ಯಾಗುಡಿ:** ಮೇ ೧ರಂದು ವಿಶೇಷ ಪೂಜೆ, ಮೆರವಣಿಗೆ ಹಾಗೂ ಪ್ರವಚನಗಳು ನಡೆದುವು. ೧೨೦೦ ಜನರು ಭಾಗವಹಿಸಿದ್ದರು. **೧೩. ಝಾರ್ ಗ್ರಾಮ:** ಮೇ ೧ರಂದು ಸಾರ್ವಜನಿಕ ಸಭೆ. **೧೪. ಕಡಪ:** ಏಪ್ರಿಲ್ ೨೩ರಂದು ಸತ್ಸಂಗ ಕಾರ್ಯಕ್ರಮ. **೧೫. ಕೊಯಿಲಾಂಡಿ:** ಮೇ ೧ ರಂದು ಸಾರ್ವಜನಿಕ ಸಭೆ. **೧೬. ಲಕ್ನೋ:** ಏಪ್ರಿಲ್ ೩೦ರಂದು ಶಾಸ್ತ್ರೀಯ ಸಂಗೀತ ಕಾರ್ಯಕ್ರಮ. ಮೇ ೧ರಂದು ಸಾರ್ವಜನಿಕ ಸಭೆ. **೧೭. ಮದುರೈ :** ಮೇ ೧೫, ೧೭ರಂದು ಅಧ್ಯಾಪಕರ ತರಬೇತಿ ಕಾರ್ಯಕ್ರಮ. **೧೮. ಮೇದಿನೀಪುರ:** ಮೇ ೨೦, ೨೧ರಂದು ಆವಾಸಿ ಯುವ ಶಿಬಿರ. **೧೯. ನಾರಾಯಣಪುರ:** ಮೇ ೧ರಂದು ವಿಶೇಷ ಪೂಜೆ, ಮೆರವಣಿಗೆ, ಸಾರ್ವಜನಿಕ ಸಭೆ. ೧೨೦೦ ವಿದ್ಯಾರ್ಥಿಗಳು, ೨೦೦ ಮಂದಿ ಭಕ್ತರು ಭಾಗವಹಿಸಿದ್ದರು. **೨೦. ಪೂರ್ಣಿಯಾ:** ಮೇ ೧ರಂದು ಸಾರ್ವಜನಿಕ ಸಭೆ. **೨೧. ರಾಜ್‌ಕೋಟ್:** ಏಪ್ರಿಲ್ ೩೦ ರಂದು ಸರ್ವಧರ್ಮ ಸಭೆ. **೨೨. ರಾಂಚಿ ಮೊರಬಾದಿ:** ಮೇ ೧೩ ರಿಂದ ೧೫ರ ವರೆಗೆ ವಿವಿಧ ಕಾರ್ಯಕ್ರಮಗಳು – ಸಾರ್ವಜನಿಕ ಸಭೆ, ಯುವ ಸಮ್ಮೇಳನ ಇತ್ಯಾದಿ. **೨೩. ಶಿಲ್ಲಾಂಗ್:** ಏಪ್ರಿಲ್ ೨೭ರಂದು ನಡೆದ ಕಾರ್ಯಕ್ರಮದಲ್ಲಿ ಮೇಘಾಲಯ ರಾಜ್ಯದ ರಾಜ್ಯಪಾಲರು ಭಾಗವಹಿಸಿ ಮಾತನಾಡಿದರು. **೨೪. ಸಿಲ್‌ಚಾರ್:** ಮೇ ೧ – ವಿಶೇಷ ಭಾಷಣ, ಭಜನೆ. **೨೫. ತಂಜಾವೂರು:** ಏಪ್ರಿಲ್ ೩೦ರಂದು ವಿದ್ಯಾರ್ಥಿ ಸಮ್ಮೇಳನ, ಮೇ ೧೨ರಂದು ಅಧ್ಯಾಪಕರ ಸಮ್ಮೇಳನ. **೨೬. ವಿಶಾಖಪಟ್ಟಣಂ:** ಏಪ್ರಿಲ್ ೩೦ ರಂದು ಸಾರ್ವಜನಿಕ ಸಭೆ.

**ವಿದೇಶಗಳಲ್ಲಿ : ಕೊಲಂಬೋ:** ಬಟ್ಟಿಕಲೋವ ಉಪಕೇಂದ್ರದಲ್ಲಿ ಸಾರ್ವಜನಿಕ ಸಭೆ. **ಮೈಮನ್‌ಸಿಂಗ್** – ಬಾಂಗ್ಲಾದೇಶ: ಮೇ ೫ರಂದು ವಿಶೇಷ ಭಾಷಣ. **ಬ್ರಿಸ್ಬೇನ್,** ಆಸ್ಟ್ರೇಲಿಯ: ಮಾರ್ಚ್ ೧೮ರಂದು ಸಮನ್ವಯ ದಿನಾಚರಣೆ; ಏಪ್ರಿಲ್ ೩೦ರಂದು ಸರ್ವಧರ್ಮ ಸಭೆ ನಡೆದವು.




Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020